Scarcity of Drinking Water in Villages of Hassan District

158 SRI K. H. HANUME GOWDA (Hassan)—Will the Minister for Rural Development and Panchayat Raj be pleased to state:—

the names of villages of Shantigram, Koteya and Kasaba Hoblies in Hassan constituency where there is hardship for want of drinking water ?

SRI B. RAMAIAH(Minister for Rural Development and Panchayat Raj).—

The names of villages under the jurisdiction of Shantigram-Kotaya and Kasaba Hoblies of Hassan constituency. wherein hardship is caused for want of drinking water is laid on the table.*

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಹಾಸನ ಕ್ಷೇತ್ರದ ಶಾಂತಿಗ್ರಾಮ, ಕಟ್ಟಾಯ ಮತ್ತು ಕಸಬಾ– ಈ ೩ ಹೋಬಳಿಗಳಿಗೆ ಸೇರಿದ ಗ್ರಾಮಗಳ ಪೈಕಿ ಎಷ್ಟು ಗ್ರಾಮಂಗಳಿಗೆ ಕುಡಿಯುವ ನೀರಿನ ತೊಂದರೆಗೆ ಒಳಪಟ್ಟಿದ್ದಾರೆ ಅನ್ನುವುದರ ಬಗ್ಗೆ ೧೨ ಊರುಗಳ ಒಂದು ಪಟ್ಟಿಯನ್ನು ನಮ್ಮ ಮುಂದೆ ಇಟ್ಟಿದ್ದೀರಿ. ಇದರ ಜೊತೆಗೆ ಇನ್ನೂ ೪ ಗ್ರಾಮಂಗಳು ಇವೆ. ಆ ಗ್ರಾಮಗಳನು ಈ ಪಟ್ಟಿಯಲ್ಲಿ ಏತಕ್ಕೆ ಸೇರಿಸಲಿಲ್ಲಾ ? ದಯವಿಟ್ಟು ವೆರಿಫೈ ಮಾಡಿ ಹೇಳುತ್ತೀರಾ ? ಆ ೪ ಗ್ರಾಮಂಗಳು ಯಾವ್ಯವುದು ಅನ್ನುವುದನ್ನು ತಮ್ಮ ಮುಂದೆ ಈಗ ಹೇಳುತ್ತೇನೆ. ದಯವಿಟ್ಟು ವೆರಿಫೈ ಮಾಡಿ ಹೇಳಿ ಹಾಸನ ಕಸಬಾದ ಗೌರಪುರದಲ್ಲಿ ಕುಡಿಯುವ ನೀರಿನ ತೊಂದರೆ ಇದೆ, ಹಾಸನ ಕಸಬಾದ ಕಳ್ಳಿಕೊಪ್ಪಲ್ಲೂ ಅಲ್ಲೂ ಕುಡಿಯುವ ನೀರಿನ ತೊಂದರೆ ಇದೆ. ಕಟ್ಟಾಣಿ ಹೋಬಳಿಯಲ್ಲೂ ಕುಡಿಯುವ ನೀರಿನ ತೊಂದರೆ ಇದೆ. ಇದಕ್ಕೆ ೩೫ ಗ್ರಾಮಗಳು ಸೇರಿವೆ, ಅಲ್ಲೆಲ್ಲಾ ಕುಡಿಯುವ ನೀರಿನ ತೊಂದರೆ ಇದೆ. ಇನ್ನು ಇದರ ಜೊತೆಗೆ ಹಾಸನ ಕಸಬಾ ದೊಡ್ಡ ಬಾಗಿಲಹಳ್ಳಿ ಇಲ್ಲೂ ಕೂಡ ನೀರಿನ ತೊಂದರೆ ಇದೆ. ಇದು ಹರಿಜನ ಕಾಲೋನಿ. ನಿಮ್ಮ ಈ ಪಟ್ಟಿಯಲ್ಲಿ ಈ ೪ ಗ್ರಾಮಗಳು ಬಿಟ್ಟು ಹೋಗುವುದಕ್ಕೆ ಕಾರಣ ಏನಂ ಸ್ವಾಮಿ ?

ಶ್ರೀ ಬಿ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಈಗ ಪಟ್ಟಿಯಲ್ಲಿ ಕೊಟ್ಟಿರುವ ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ ಏನು ಇದೆ ಆ ಬಗ್ಗೆ ಏನೇನು ಕೆಲಸಗಳನ್ನು ತೆಗೆದುಕೊಂಡಿದ್ದೇವೆ ಅನ್ನುವ ವಿಚಾರದ ಬಗ್ಗೆ ಎಲ್ಲಾ ವಿವರಗಳನ್ನೂ ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇನೆ. ಇವಲ್ಲದೇ ಮಾನ್ಯ ಸದಸ್ಯರು ಇನ್ನೂ ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಎಂದು ಹೇಳಿದ್ದಾರೆ. ಅದರ ಬಗ್ಗೆಯೂ ಪರೀಶಿಲನೆ ಮಾಡಿ ತಕ್ಕ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಇದರ ಜೊತೆಯಲ್ಲೇ, ನಿನ್ನೆ ದಿವಸ ೪ ಗಂಟೆಯಲ್ಲಿ ಇದಕ್ಕೆಸಂಬಂದಪಟ್ಟಂತೆ ಅಧಿಕಾರಿಗಳಿಂದ ವರದಿಯನ್ನು ತರಿಸಿದ್ದೇನೆ. ಅದರ ಪ್ರಕಾರ ಇನ್ನೂ ಎರಡು ಕಡೆಗಳಲ್ಲಿ ಈ ಕೆಲಸಗಳನ್ನು ತೆಗೆದುಕೊಂಡಿದ್ದಾರೆ ಅನ್ನುವ ವರದಿ ಬಂದಿದೆ. ಕಟ್ಟಾಯ ಕಸಬಾ ಹೋಬಳಿ, ಮತ್ತು ಕಣವೆ, ಆಲದಹಳ್ಳಿ, ಇಲ್ಲೂ ಕೂಡ ಕೆಲಸಗಳನ್ನು ತೆಗೆದುಕೊಂಡು ಅದು ಪೂರ್ಣವಾಗುತ್ತಾ ಇದೆ ಎನ್ನುವ ವರದಿ ಬಂದಿದೆ. ಆದರೂ ಸಹ ಈಗ ಮಾನ್ಯ ಸದಸ್ಯರು ಯಾವ ಯಾವ ಹಳ್ಳಿಗಳ ಹೆಸರನ್ನು ಹೇಳಿದ್ದಾರೆ, ಅದನ್ನು ಪರಿಶೀಲನೆ ಮಾಡಿ, ಅಲ್ಲಿ ಶೀಘ್ರವಾಗಿ ಕುಡಿಯುವ ನೀರಿನ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಕಣಿವೆ ಆಲದಹಳ್ಳಿಯಲ್ಲಿ ೨ ತಿಂಗಳ ಹಿಂದೆ ಬೋರ್‌ವೆಲ್ ಹಾಕಿದರು. ಆದರೆ ಹ್ಯಾಂಡ್–ಪಂಪ್ ಜೋಡಿಸಿಲ್ಲ. ೩ ದಿವಸಗಳ ಹಿಂದೆ ಸಹ ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ, ಜನರ ಕಷ್ಟ ಅಧಿಕಾರಿಗಳಿಗೆ ಅರ್ಥವಾಗುತ್ತಿಲ್ಲ; ಹ್ಯಾಂಡ್- ಪಂಪ್ ಜೋಡಿಸದಿರಲು ಕಾರಣವೇನು ?

---

* Copies placed in the Karnataka Legislature Library *Vide* No dated.....

ಶ್ರೀ ಬಿ. ರಾಮಯ್ಯ.—ನಮ್ಮಲ್ಲಿ ಹ್ಯಾಂಡ್-ಪಂಪ್‌ಗಳ ಕೊರತೆ ಇತ್ತು. ಈಗ ಕೆಲಸ ನಡೆದಿರುವ ಕಡೆಗಳಲ್ಲಿ ಕೂಡಲೇ ಹ್ಯಾಂಡ್-ಪಂಪ್‌ಗಳನ್ನು ಫಿಕ್ಸ್ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಡಣಾಯಕನಹಳ್ಳಿಯ ೨೫ ಸಂಸಾರಗಳು ಜನತಾ ಕಾಲೋನಿಗೆ ಹೋಗಿ ೩ ವರ್ಷಗಳಾಯಿತು. ಅವರು ಹತ್ತಾರು ಅರ್ಜಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದುಕೊಂಡರೂ ಸಹ ಇನ್ನೂ ಅಲ್ಲಿ ಬೋರ್-ವೆಲ್ ತೆಗೆಸಿಲ್ಲ. ಜನತಾ ಕಾಲೋನಿಗಳಿಗೆ ಮೊದಲು ನೀರನ್ನು ಒದಗಿಸಬೇಕೆಂಬ ಸರ್ಕಾರದ ಆದೇಶವಿದ್ದರೂ ಸಹ ಕಳೆದ ೩ ವರ್ಷಗಳಿಂದ ನೀರನ್ನು ಒದಗಿಸಿಲ್ಲ.. ಇದಕ್ಕೆ ಕಾರಣವನ್ನು ಈ ರೀತಿ ಕೊಟ್ಟಿದ್ದಾರೆ:

''ಹಾಲಿ ಭಾವಿ ಇರುವುದಿಲ್ಲ. ಈಗ ಗ್ರಾಮಸ್ಥರು ಹತ್ತಿರವಿರುವ ಹಳ್ಳದಿಂದ ನೀರು ತೆಗೆದು ಕೊಳ್ಳುತ್ತಿದ್ದು ಕೊಳವೆ ಭಾವಿಯೊಂದನ್ನು ತೋಡಲು ಪಿ. ಎಚ್. ಇ. ಇಲಾಖೆಗೆ ತಿಳಿಸಿದೆ''.

ನಾನು ನಾಲ್ಕು ಸಲ ಅಲ್ಲಿಗೆ ಹೋಗಿ ನೋಡಿದ್ದೇನೆ. ನೀರಿನ ತೊಂದರೆಯಿಂದ ಜನರು ಕಣ್ಣೀರು ಹಾಕುತ್ತಿದ್ದಾರೆ. ಇಲ್ಲಿಯವರೆಗೆ ಅಲ್ಲಿ ಬಾವಿ ತೆಗೆಸದಿರಲು ಕಾರಣವೇನು ?

ಶ್ರೀ ಬಿ. ರಾಮಯ್ಯ.— ಮಾನ್ಯ ಹನುಮೇಗೌಡರಿಗೆ ಈ ಬಗ್ಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ನನಗೂ ಇದೆ, ನಾನು ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರ ಮಾಡಿ ಅನೇಕ ಹಳ್ಳಿಗಳನ್ನು ನೋಡಿಕೊಂಡು ಬಂದಿದ್ದೇನೆ. ಈಗ ಹಾಸನ ಜಿಲ್ಲೆಯಲ್ಲಿ ೨-೩ ರಿಗ್ ಯಂತ್ರಗಳು ಕೆಲಸ ಮಾಡುತ್ತಿವೆ. ಮತ್ತು ಶೀಘ್ರವಾಗಿ ಬಾವಿಗಳನ್ನು ತೋಡಲು ಆದೇಶ ಕೊಟ್ಟಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.— ಬಿಗಹಳ್ಳಿ ಬಡಾವಣೆಯ ಜನರು ಒಂದು ಫರ್ಲಾಂಗ್ ದೂರವಿರುವ ಮೂಲಗ್ರಾಮದಿಂದ ನೀರು ತೆಗದುಕೊಳ್ಳುತ್ತಿದ್ದಾರೆಂದು ಇಲ್ಲಿ ಹೇಳಿದ್ದಾರೆ, ಇಲ್ಲಿ ೨೫ ಸಂಸಾರಗಳು ಇವೆ, ಇಲ್ಲಿರುವವರೆಲ್ಲ ವ್ಯವಸಾಯ ಕೂಲಿಗಾರರು ಇಲ್ಲಿನ ಹೆಣ್ಣುಮಕ್ಕಳು ಒಂದು ಫರ್ಲಾಂಗ್ ದೂರದಿಂದ ನೀರನ್ನು ತರಬೇಕೆಂದರೆ ಅವರು ಕೂಲಿ ಕೆಲಸಕ್ಕೆ ಹೋಗುವುದು ಯಾವಾಗ ? ಇಷ್ಟೊಂದು ನಿರ್ಲಕ್ಷದಿಂದ ಉತ್ತರ ಕೊಟ್ಟರೆ ಹೇಗೆ ? ಈ ಬಡಜನರಿಗೆ ಅನುಕೂಲ ಮಾಡಿಕೊಡುವ ಹೊಣೆ ಯಾರದು?

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರು ಇದನ್ನು ಈಗ ನನ್ನ ಗಮನಕ್ಕೆ ತಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಆಶಯ ಏನಿದೆ ಎಂದರೆ, ಇದೇ ನವೆಂಬರ್ ತಿಂಗಳೊಳಗೆ ಕರ್ನಾಟಕ ರಾಜ್ಯದಲ್ಲಿರುವ ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ಬಾವಿಯನ್ನು ಒದಗಿಸಬೇಕು ಎಂಬುದು. ಈಗ ೪೦೨ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲ. ಈ ಹಳ್ಳಿಗಳ ಪೈಕಿ ಮಾನ್ಯ ಸದಸ್ಯರು ಹೇಳುತ್ತಿರುವ ಹಳ್ಳಿಗಳು ಸಹ ಸೇರುತ್ತವೆ. ಈ ಹಳ್ಳಿಗಳಿಗೆ ಶೀಘ್ರದಲ್ಲಿಯೇ ಬಾವಿಗಳನ್ನು ಒದಗಿಸಿಕೊಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.— ಸತ್ತಿಗರಹಳ್ಳಿ ಕೊಪ್ಪಲಿನಲ್ಲಿ ೪೫ ಮನೆಗಳಿವೆ. ಇಲ್ಲಿ ಬೋರ್ ವೆಲ್ ಮಂಜೂರಾಗಿದ್ದರೂ ಸಹ ಈ ಕೊಪ್ಪಲಿಗೆ ಒಂದುವರೆ ಮೈಲಿ ದೂರದಲ್ಲಿರುವ ಇನ್ನೊಂದು ಊರಿಗೆ ತೆಗೆದುಕೊಂಡು ಹೋಗಿ ಹಾಕಿದರು. ಅಲ್ಲಿ ಈಗಾಗಲೇ ಒಂದು ಬೋರ್‌ವೆಲ್ ಇದ್ದರೂ ಸಹ ಮತ್ತೊಂದು ಬೋರ್‌ವೆಲ್‌ನ್ನು ಗೌಡರೊಬ್ಬರ ಮನೆ ಪಕ್ಕದಲ್ಲಿ ಹಾಕಿದ್ದಾರೆ. ಅಧಿಕಾರಿಗಳು ಇಷ್ಟೊಂದು ನಿರ್ಲಕ್ಷ್ಯದಿಂದ ಕೆಲಸ ಮಾಡುವುದಾದರೆ ನಾವು ಇಲ್ಲಿ ಕೆಲಸ ಮಾಡುವುದೇ ಕಷ್ಟವಾಗುತ್ತದೆ. ಬಾವಿಗಳ ವಿಷಯದಲ್ಲಿ ಮುಖ್ಯಮಂತ್ರಿಗಳ ಆಶೋತ್ತರ ಹಾಗೂ ಸರ್ಕಾರದ ಅನುಕಂಪ ಈಡೇರದಿರಲು ಅಧಿಕಾರಿಗಳ ಬೇಜವಾಬ್ದಾರಿಯೇ ಕಾರಣ. ಒಟ್ಟಿನಲ್ಲಿ ನಾನು ಹೇಳಿದ ೧೬ ಹಳ್ಳಿಗಳಿಗೆ ಇನ್ನು ಎಷ್ಟು ದಿವಸಗಳಲ್ಲಿ ನೀರನ್ನು ಒದಗಿಸಿಕೊಡುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಬಿ. ರಾಮಯ್ಯ.—ಖಡಾಖಂಡಿತವಾಗಿ ಇಷ್ಟೇ ದಿವಸಗಳಲ್ಲಿ ಒದಗಿಸುತ್ತೇವೆಂದು ಹೇಳುವುದು ಕಷ್ಟವಾಗುತ್ತದೆ, ಆದಷ್ಟೂ ಶೀಘ್ರವಾಗಿ ನೀರನ್ನು ಒದಗಿಸಲು ವ್ಯವಸ್ಥೆ ಮಾಡುತ್ತೇನೆ.